ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4106
ಸದಸ್ಯರ ಹೆಸರು : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ)
ಉತ್ತರಿಸಬೇಕಾದ ದಿನಾಂಕ : 13–7–2005 (ಕೃಷಿ ಇಲಾಖೆಯಿಂದ ವರ್ಗಾವಣೆಯಾಗಿರುವುದು
ಉತ್ತರಿಸುವ ಸಚಿವರು : ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ರಾಜ್ಯ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	2003–04 ಹಾಗೂ 2004–05ನೇ ಸಾಲಿನಲ್ಲಿ ಸ್ವಜಲಧಾರ ಯೋಜನೆಯನ್ವಯ ಮಂಜೂರಾಗಿರುವ ಕಾಮಗಾರಿಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)	2003–04 ಹಾಗೂ 2004–05ನೇ ಸಾಲಿನಲ್ಲಿ ಸ್ವಜಲಧಾರಾ ಯೋಜನೆಯನ್ವಯ ಮಂಜೂರಾಗಿರುವ ಕಾಮಗಾರಿಗಳು ಕ್ರಮವಾಗಿ 348 ಮತ್ತು 168 ಆಗಿರುತ್ತದೆ. (ಜಿಲ್ಲಾವಾರು ವಿವರವನ್ನು ಅನುಬಂಧ –1ರಲ್ಲಿ ನೀಡಿದೆ)
ಆ.	ಸದರಿ ಯೋಜನೆಗಾಗಿ ಜನತೆಯಿಂದ ಸಂಗ್ರಹಿಸಿ ನೀಡಿದ ಹಣವೆಷ್ಟು ಹಾಗೂ ಈ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದ ಹಣ ಎಷ್ಟು ಹಾಗೂ ಬಂದಂತಹ ಹಣದಲ್ಲಿ ಖರ್ಚಾಗದೇ ಉಳಿದಿರುವ ಹಣವೆಷ್ಟು (ವರ್ಷವಾರು ವಿವರ ನೀಡುವುದು)	ಸದರಿ ಯೋಜನೆಗಾಗಿ ಜನತೆಯಿಂದ ಸಂಗ್ರಹಿಸಿ ನೀಡಿದ ಹಣ; ಹಾಗೂ ಈ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದ ಹಣ ಹಾಗೂ ಬಂದಂತಹ ಹಣದಲ್ಲಿ ಖರ್ಚಾಗದೇ ಉಳಿದಿರುವ ಹಣದ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಬಿ. ಸತ್ಯನಾರಾಯಣ
ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ರಾಜ್ಯ ಸಚಿವರು.

ಅನುಬಂಧ–1

ಯೋಜನೆ – ಜೂನ್ 2005ರಂತೆ ವರ್ಷವಾರು ಭೌತಿಕ ಮತ್ತು ಆರ್ಥಿಕ ವಿವರಗಳು

ಸ್ವಜಲಧಾರ ಯೋಜನೆ – ಜೂನ್ 2005ರಂತೆ ವರ್ಷವಾರು ಭೌತಿಕ ಮತ್ತು ಆರ್ಥಿಕ ವಿವರಗಳು 2003–04 ಹಾಗೂ 2004–05ನೇ ಆರ್ಥಿಕ ಸಾಲು (ಮೊತ್ತ ಲಕ್ಷಗಳಲ್ಲಿ)

ಜಿಲ್ಲೆಯ ಹೆಸರು	ಕೇಂದ್ರ ಸರ್ಕಾರದ ಪಾಲು	ಬಿಡುಗಡೆ	ಅನುಮೋದಿತ ಯೋಜನೆಗಳು		ಪೂರ್ಣಗೊಂಡ ಯೋಜನೆಗಳು	ಸಂಗ್ರಹಿಸಿರುವ ಸಮುದಾಯ ವಂತಿಕೆ	ಒಟ್ಟು ಲಭ್ಯ ಅನುದಾನ	ಖರ್ಚು	ಉಳಿಕೆ
			ಸಂ	ಅಂದಾಜು ಮೊತ್ತ					
1	2	3	4	5	6	7	8=3+7	9	10=8–9
ಆರ್ಥಿಕ ವರ್ಷ 2003–04									
ಬಾಗಲಕೋಟೆ	40.00	20.00	9	38.08	2	3.39	23.39	7.00	16.39
ಬೆಂಗಳೂರು (ಗ್ರಾ)	70.00	70.00	18	71.21	4	5.53	75.53	30.90	44.63
ಬೆಂಗಳೂರು(ನ)	75.00	70.00	9	81.80	6	7.94	77.94	74.84	3.10
ಬೆಳಗಾಂ	60.00	25.00	4	67.26	7	6.73	31.73	31.25	0.48
ಬೀದರ್	73.00	31.50	40	142.20	0	14.76	46.26	28.00	18.26
ಬಿಜಾಪುರ	15.00	7.50	3	16.22	1	1.53	9.03	7.50	1.53
ಚಾಮರಾಜನಗರ	50.00	20.00	16	50.00	0	4.97	24.97	16.80	8.17

ಜಿಲ್ಲೆಯ ಹೆಸರು	ಕೇಂದ್ರ ಸರ್ಕಾರದ ಪಾಲು	ಬಿಡುಗಡೆ	ಅನುಮೋದಿತ ಯೋಜನೆಗಳು		ಪೂರ್ಣಗೊಂಡ ಯೋಜನೆಗಳು	ಸಂಗ್ರಹಿಸಿರುವ ಸಮುದಾಯ ವಂತಿಕೆ	ಒಟ್ಟು ಲಭ್ಯ ಅನುದಾನ	ಖರ್ಚು	ಉಳಿಕೆ
			ಸಂ	ಅಂದಾಜು ಮೊತ್ತ					
1	2	3	4	5	6	7	8=3+7	9	10=8–9
ಚಿಕ್ಕಮಗಳೂರು	61.00	61.00	8	112.73	0	8.76	69.76	31.75	38.01
ಚಿತ್ರದುರ್ಗ	20.50	10.25	5	24.70	1	2.47	12.72	4.41	8.31
ದಾವಣಗೆರೆ	10.00	5.00	5	10.20	2	1.02	6.02	5.69	0.33
ಧಾರವಾಡ	50.00	50.00	7	90.00	5	2.70	52.70	45.00	7.70
ಗದಗ್	56.50	56.50	14	41.92	10	4.22	60.72	31.08	29.64
ಗುಲ್ಬರ್ಗಾ	60.00	25.00	14	28.00	0	2.81	27.81	16.25	11.56
ಹಾಸನ	68.53	34.27	8	72.00	2	7.15	41.42	18.98	22.44
ಹಾವೇರಿ	91.00	45.50	22	79.17	14	7.92	53.42	49.95	3.47
ಕೊಡಗು	30.00	15.00	11	31.43	0	3.18	18.18	17.05	1.13
ಕೋಲಾರ	65.00	60.00	9	65.60	6	6.10	66.10	50.00	16.10
ಕೊಪ್ಪಳ	10.00	10.00	3	17.00	3	1.70	11.70	6.06	5.64

ಜಿಲ್ಲೆಯ ಹೆಸರು	ಕೇಂದ್ರ ಸರ್ಕಾರದ ಪಾಲು	ಬಿಡುಗಡೆ	ಅನುಮೋದಿತ ಯೋಜನೆಗಳು		ಪೂರ್ಣಗೊಂಡ ಯೋಜನೆಗಳು	ಸಂಗ್ರಹಿಸಿರುವ ಸಮುದಾಯ ವಂತಿಕೆ	ಒಟ್ಟು ಲಭ್ಯ ಅನುದಾನ	ಖರ್ಚು	ಉಳಿಕೆ
			ಸಂ	ಅಂದಾಜು ಮೊತ್ತ					
1	2	3	4	5	6	7	8=3+7	9	10=8–9
ಮಂಡ್ಯ	50.00	20.00	8	50.20	0	4.21	24.21	12.25	11.96
ರಾಯಚೂರು	110.00	110.00	15	436.46	0	42.47	152.47	87.24	65.23
ಶಿವಮೊಗ್ಗ	71.00	71.00	45	78.94	38	7.21	78.12	75.00	3.12
ತುಮಕೂರು	110.50	110.50	52	258.00	4	21.99	132.49	110.00	22.49
ಉಡುಪಿ	100.00	100.00	8	103.00	4	10.30	110.30	71.12	39.18
ಉತ್ತರ ಕನ್ನಡ	50.00	20.00	15	21.54	7	2.15	22.15	20.38	1.77
ಒಟ್ಟು	1397.03	1048.02	348	1988.65	116	181.12	1229.14	848.50	380.64
ಆರ್ಥಿಕ ವರ್ಷ 2004–05									
ಬೆಂಗಳೂರು (ಗ್ರಾ)	60.00	45.00	13	59.68	2	4.38	49.36	35.00	14.36
ಬೆಂಗಳೂರು(ನ)	60.00	45.00	6	75.04	5	6.86	51.86	47.85	4.01
ಚಾಮರಾಜನಗರ	25.00	18.75	9	27.00	0	2.70	21.45	14.71	6.74

ಜಿಲ್ಲೆಯ ಹೆಸರು	ಕೇಂದ್ರ ಸರ್ಕಾರದ ಪಾಲು	ಬಿಡುಗಡೆ	ಅನುಮೋದಿತ ಯೋಜನೆಗಳು		ಪೂರ್ಣಗೊಂಡ ಯೋಜನೆಗಳು	ಸಂಗ್ರಹಿಸಿರುವ ಸಮುದಾಯ ವಂತಿಕೆ	ಒಟ್ಟು ಲಭ್ಯ ಅನುದಾನ	ಖರ್ಚು	ಉಳಿಕೆ
			ಸಂ	ಅಂದಾಜು ಮೊತ್ತ					
1	2	3	4	5	6	7	8=3+7	9	10=8–9
ಚಿಕ್ಕಮಗಳೂರು	61.00	45.75	11	60.99	0	2.98	48.03	14.00	34.73
ಚಿತ್ರದುರ್ಗ	10.00	7.50	0	9.50	0	0.95	8.45	2.10	6.35
ದಾವಣಗೆರೆ	10.00	7.50	6	10.00	0	0.70	8.20	2.25	5.95
ಹಾಸನ	40.00	30.00	8	43.30	0	4.33	34.33	4.68	29.65
ಕೊಡಗು	30.00	22.50	5	30.60	0	3.02	25.52	16.00	9.52
ಕೋಲಾರ	40.00	30.00	4	40.90	0	3.25	33.25	20.00	13.25
ಮಂಡ್ಯ	30.00	22.50	4	30.00	0	2.15	24.65	10.00	14.65
ಶಿವಮೊಗ್ಗ	25.00	18.75	20	27.70	10	2.53	21.28	8.00	13.28
ತುಮಕೂರು	80.00	60.00	13	79.83	5	7.94	67.94	35.00	32.94
ಉಡುಪಿ	80.00	60.00	7	83.79	1	8.80	68.80	27.14	41.66
ಬಳ್ಳಾರಿ	702.54	702.54	61	702.54	50	70.25	772.79	521.81	250.98
ಒಟ್ಟು	1253.54	1115.79	168	1281.05	73	120.82	1236.61	758.54	478.07

ಸೂಚನೆ:– ವಲಯ ಸುಧಾರಣೆ ಯೋಜನೆಯಡಿ ಕೈಗೆತ್ತಿಕೊಂಡಿದ್ದ ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಸೂಚನೆ ಮೇರೆ 2004–05ನೇ ಆರ್ಥಿಕ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಗೆ ರೂ. 702.54 ಲಕ್ಷಗಳನ್ನು ಹಂಚಿಕೆ ಮಾಡಿದೆ.

ಶ್ರೀ ಎನ್. ಚಲುವರಾಯಸ್ವಾಮಿ: ಶಾಸಕರ ಕಾಳಜಿ ಏನಿದೆ ಅದರ ಬಗ್ಗೆ ನಾವು ಹೆಚ್ಚಿನ ರೀತಿಯಲ್ಲಿ ಕ್ರಮ ತೆಗೆದುಕೊಂಡು ಅದನ್ನು ಭರ್ತಿ ಮಾಡುವುದಕ್ಕೆ ಬಹಳ ಸೀರಿಯಸ್ಸಾಗಿ ಗಮನ ಹರಿಸುತ್ತೇನೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಸ್ವಜಲಧಾರಾ ಯೋಜನೆಯಡಿಯಲ್ಲಿ 2003–04ರಲ್ಲಿ 348 ಕಾಮಗಾರಿಗಳನ್ನು 116 ಗಾಮಗಾರಿಗಳು ಮುಗಿದಿವೆ. 35 ಮಾರ್ಕ್ಸ್ ತೆಗೆದುಕೊಂಡು ಪಾಸ್ ಕೂಡ ಆಗಿಲ್. 2004–05ರಲ್ಲಿ 168 ಕಾಮಗಾರಿಗಳಲ್ಲಿ 73 ಕಾಮಗಾರಿಗಳು ಆಗಿವೆ. ಇದು ಕೇಂದ್ರ ಸರ್ಕಾರ ಮಾನ್ಯ ಅಟಲ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಪ್ರಾರಂಭ ಮಾಡಿದ ಒಳ್ಳೆಯ ಯೋಜನೆ. ಗ್ರಾಮೀಣ ಭಾಗದ ಜನತೆ ನೀರನ್ನು ಕೊಡಿಸುವುದಕ್ಕೆ ರಾಜ್ಯ ಸರ್ಕಾರ ತನ್ನದೇ ಆದ ಆದಾಯದಿಂದ ಸಾಲುವುದಿಲ್ಲವೆಂದು ಗೊತ್ತಾದಾಗ ಕೇಂದ್ರ ಸರ್ಕಾರ ಪ್ರಾರಂಭ ಮಾಡಿದ ಈ ಯೋಜನೆ, ಈ ಕೆಲಸ ಸಹ ಮಾಡುವುದಕ್ಕಾಗುವುದಿಲ್ಲವೆಂದು ಸರಿಯಾದ ಸಮಯದಲ್ಲಿ ಮಾಡಲಿಲ್ಲ. ನಾವು ಇಲ್ಲಿ ಕುಡಿಯುವ ನೀರಿಗೆ ಇಡೀ ಸದನದ ಎಲ್ಲಾ ಸದಸ್ಯರು ಬೊಬ್ಬೆ ಹೊಡೆಯುತ್ತಿದ್ದೇವೆ. ಕೊಟ್ಟಿರುವ ಹಣ ಬಳಕೆಯಾಗಿಲ್ಲ. ಕಾಮಗಾರಿಗಳು ಪೂರ್ಣವಾಗಿಲ್ಲ. ಗ್ರಾಮ ಪಂಚಾಯತಿಯಲ್ಲಿ ನಮ್ಮ ಸದಸ್ಯರು ಅಧ್ಯಕ್ಷರಾಗಿ ಅದಕ್ಕೆ ಒಂದು ಸಮಿತಿ ಮಾಡಿಕೊಳ್ಳುತ್ತಾರೆ. ಸ್ವಜಲ ಧಾರಾ ಯೋಜನೆ ಅನುಷ್ಠಾನ ಮಾಡುವುದಕ್ಕೆ ಫಲಾನುಭವಿಗಳು ಯಾರು ಇರುತ್ತಾರೆ ಒಂದು ಹಳ್ಳಿಯಿಂದ ಆದರೆ ಆ ಹಳ್ಳಿಗೆ ನೀರು ತರುವುದು ಎಂದರೆ, ಜರಿ ನೀರು ಆದರೆ ಸಂಬಂಧಪಟ್ಟವರು, ಅಥವಾ ಅಯಾ ಊರಿಗೆ ಪಂಪ್ ಬೇಕೆಂದರೆ ಆಯಾ ಸಮಿತಿ ಮಾಡಿಕೊಳ್ಳುತ್ತಾರೆ. ಆ ಸಮಿತಿಗೆ ನಿಮ್ಮ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ಸಹಕಾರ ಕೊಡುವುದಿಲ್ಲ. ಏಕೆಂದರೆ ಅವರು ಲೋಕಲ್‌ನವರು ಇನ್‌ವಾಲ್ವ್‌ಮೆಂಟ್ ಇದೆ ಅದರಲ್ಲಿ. ಅವರು ಯಾವುದಾದರೂ ಗುತ್ತಿಗೆದಾರರುಗಳಾದರೆ ಎಲ್ಲಾ ರೀತಿಯ ಸಹಕಾರ ಕೊಡುತ್ತಾರೆ. 10 ಪರ್ಸೆಂಟ್ ಲೋಕಲ್ ಕಾಂಟ್ರಿಬ್ಯೂಷನ್ ಇದೆ. ಅವರ ಸಹಕಾರ ಇಲ್ಲದೆ ಹೊರತು ಅದನ್ನು ಜಾರಿಗೊಳಿಸುವುದಕ್ಕಾಗುವುದಿಲ್ಲ. ಹಾಗಾಗಿ ನಿಮ್ಮ ಇಂಜಿನಿಯರಿಂಗ್ ವಿಭಾಗದವರು ಅವರಿಗೆ ಸಹಕಾರ ಕೊಡುವುದಿಲ್ಲ. ಹಾಗಾಗಿ ಆ ಕಾಮಗಾರಿಗಳು ಪೂರ್ಣ ಮುಗಿಯದೆ ಇರುವುದು. ಹಾಗಾಗಿ ಮಾನ್ಯ ಅಧ್ಯಕ್ಷರೆ, ಬಂದಿರುವ ಹಣ ಕೂಡಾ ಖರ್ಚಾಗುತ್ತಿಲ್ಲ. ಮಂಜೂರಾಗಿರುವ ಕಾಮಗಾರಿ ಅನುಷ್ಠಾನ ಆಗುತ್ತಿಲ್ಲ. ಕೇಂದ್ರ ಸರ್ಕಾರದಿಂದ ಬರಬೇಕಾದ ಉಳಿದ ಹಣ ಕೂಡಾ ತರಿಸಿಕೊಳ್ಳುವುದಕ್ಕಾಗುತ್ತಿಲ್ಲ. ಹಾಗಾಗಿ ತಾವು ತಮ್ಮ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಯಾವ ಸಮಯದ ಮಿತಿ ಒಳಗಡೆ ಈ ಎಲ್ಲಾ

ಕಾಮಗಾರಿಗಳನ್ನು ಮುಗಿಸುವುದಕ್ಕೆ ಇಲ್ಲಿಂದ ನಿರ್ದೇಶನ ನೀಡುತ್ತೀರಿ ಎಂದು ತಿಳಿಸಬೇಕು.

ಶ್ರೀ ಬಿ. ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, 2003–04,2004–05 ಸಾಲಿನಲ್ಲಿ ಈ ಯೋಜನೆ ಅಡಿ ಮಂಜೂರಾಗತಕ್ಕಂತಹ ಕಾಮಗಾರಿಗಳು 2003–04ರಲ್ಲಿ 348 ಆಗಿದ್ದು, 168 ಕಾಮಗಾರಿಗಳು ಮಂಜೂರಾಗಿದೆ. ಪೂರ್ಣಗೊಂಡ ಕಾಮಗಾರಿಗಳು 116.2004–05ರಲ್ಲಿ 73, 2003–04ರಲ್ಲಿ 33.33 ಪರ್ಸೆಂಟ್. 2004–05ರಲ್ಲಿ 43.45 ಪರ್ಸೆಂಟ್ ಕಾರ್ಯಕ್ರಮ ಆಗಿದೆ. ಇದು ಏನಾಗಿದೆ ಎಂದರೆ, ಇದರಲ್ಲಿ ಕುಂಠಿತ ಆಗುವುದಕ್ಕೆ ಕಾರಣ ಈ ಸಮುದಾಯದಿಂದ ಈ ಯೋಜನೆಗಳನ್ನು ಮಾನ್ಯ ಶಾಸಕರು ಹೇಳಿದ ಹಾಗೆ ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಸಮಿತಿವತಿಯಿಂದ ನಿರ್ವಹಿಸಬೇಕು. ಹಾಗಾಗಿ ಈ ಪಂಚಾಯಿತಿ ಚುನಾವಣೆಗಳು ಮಧ್ಯೆ ಬಂದಿದ್ದರಿಂದ ಚುನಾವಣೆ ವ್ಯವಸ್ಥೆ ಹತ್ತಿರ ಬಂದಿದ್ದರಿಂದ, ಗ್ರಾಮೀಣ ಸಮಿತಿಗಳು ಏನು ಉದ್ದೇಶ ಇಟ್ಟು ಕೊಂಡಿದ್ದರು. ಆ ಉದ್ದೇಶದಂತೆ ಅವರು ಕಾರ್ಯಗತ ಕಗೊಳಿಸುವುದರಲ್ಲಿ ಹಿಂತಜರಿತ ಆಗಿದ್ದರಿಂದ ಅದು ಸ್ವಲ್ಪ ತಡವಾಗಿದೆ. ಮತ್ತು ಇದು ಹೊಸ ಪದ್ಧತಿಯೂ ಆಗಿರುವುದಿರಂದ ಆ ಹಿನ್ನೆಲೆಯಲ್ಲಿ ಸ್ವಲ್ಪ ವಿಳಂಬ ಆಗಿದೆ. ಜೊತೆಗೆ ನೀರಿನ ಮೂಲಗಳು ನಮಗೆ ಲಭ್ಯವಾಗುತ್ತಿಲ್ಲ. ಹಾಗಾಗಿ ಕೆಲವು ಕಡೆ ಕುಂಠಿತ ಆಗಿವೆ. ಅದನ್ನು ನಾವು ಚುರುಕುಗೊಳಿಸುವುದಕ್ಕೆ ಅನೇಕ ಸ್ವಜಲ ಧಾರಾ ಯೋಜನೆ ಸಮುದಾಯ ಸಹಭಾಗಿತ್ವದ ಪರಿಕಲ್ಪನೆ ಮೇಲೆ ಅನುಷ್ಠಾನಗೊಳಿಸುತ್ತಿರುವ ಹಿನ್ನೆಲೆಯಲ್ಲಿ ನೂತನವಾಗಿ ಆಯ್ಕೆ ಆಗಿರುವ ಗ್ರಾಮ ಪಂಚಾಯಿತಿ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ತರಬೇತಿ ನೀಡುವುದರ ಮೂಲಕ ಈ ಯೋಜನೆ ಪರಿಕಲ್ಪನೆ ಮೂಡಿಸಿ ಕಾರ್ಯಕ್ರಮ ಕೈಗೆತ್ತಿಕೊಳ್ಳುವುದ ಪ್ರಯತ್ನ ಮಾಡುತ್ತಿದ್ದೇವೆ. ಈ ಯೋಜನೆ ಎರಡು ವರ್ಷಗಳು ಆಗಿದ್ದು, ಆಶಾದಾಯಕ ಪ್ರಗತಿಯನ್ನು ನಾವು ಎರಡು ವರ್ಷಗಳಲ್ಲಿ ಮುಗಿಸಬೇಕೆಂದು ಇದ್ದೇವೆ. ಕೈಗೆತ್ತಿಕೊಳ್ಳಲಾದ ಎಲ್ಲಾ ಕಾಮಗಾರಿಗಳನ್ನು ಸಹ ಪ್ರಗತಿ ಹಾದಿಯಲ್ಲಿ ಸಾಗುತ್ತಿದ್ದೇವೆ. ಪೂರ್ಣಗೊಳ್ಳುವುದಕ್ಕೆ ಸ್ವಲ್ಪ ಸಮಯ ಬೇಕಾಗಿದೆ. ಈ ಯೋಜನೆಯಲ್ಲಿ ಬರುವ ಯೋಜನೆಗಳು ಅಡಚಣೆಗಳು ರಾಜ್ಯ ಮಟ್ಟದ, ಜಿಲ್ಲಾ ಮತ್ತು ಮತ್ತು ತಾಲ್ಲೂಕು ಮಟ್ಟ ಮತ್ತು ಗ್ರಾಮಮಟ್ಟದ ಸಭೆಗಳ ಮೂಲಕ ಸಂಪರ್ಕ ಸಾಧಿಸಿ ತೊಂದರೆ ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇವರಿಗೆ ಎಲೆಕ್ಟ್ರಿಸಿಟಿ ಪ್ರಾಬ್ಲಂ ಇತ್ತು. ಎಲೆಕ್ಟ್ರಿಸಿಟಿ ಮಂತ್ರಿಗಳು ಮತ್ತು ಇವರು ಕೂತು ಮಾತನಾಡಬೇಕು. 50,000 ಒಂದು ಲಕ್ಷ ಡೆಪಾಸಿಟ್ ಕಡ್ಡಿ ಎಂದರೆ ಹಳ್ಳಿಯ ಕಮಿಟಿಯಲ್ಲಿ ದುಡ್ಡು ಇಲ್ಲ.

ಸ್ವಜಲ ಧಾರಾ ಕಮಿಯಿಯಲ್ಲಿ ಇದು ಸ್ವಲ್ಪ ತೊಂದರೆಯಾಗಿದೆ. ಇನ್ನು ಒಂದು ಎರಡು ವರ್ಷಗಳಾದರೂ ನಿಮ್ಮ ಪ್ರೋಗ್ರೆಸ್ 50 ಪರ್ಸೆಂಟ್‌ಗಿಂತ ಕಡಿಮೆ ಇರುವುದಕ್ಕೆ ಸ್ಥಳೀಯ ಕಮಿಟಿಗಳು ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಆದರಿಂದ ನಿಮ್ಮ ಇಂಜಿನಿಯರ್‌ಗಳಿಗೆ ಕಮಾಯಿ ಸಿಗುತ್ತಿಲ್ಲ. ಪರ್ಸೆಂಟೇಜ್ ಸಿಗುತ್ತಿಲ್ಲ. ಅದಕ್ಕಾಗಿ ಅವರು ಹೋದರೆ ಕಾಲಕಾಲಕ್ಕೆ ಬಿಲ್ ಮಾಡಿ ಕೊಡುವುದಿಲ್ಲ. ಅವರಿಗೆ ಬಿಲ್ ಮಾಡಿ ಕೊಟ್ಟರೆ ಆಗಾಗ ಹಣ ಡ್ರಾ ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಎರಡು ಕೊರತೆ ಇದೆ. ಕರೆಂಟ್ ಕೂಡ ಕಷ್ಟ. ಸ್ವಜಲ ಧಾರಾ ಯೋಜನೆ ಮೂಲಕ ಈ ಕಮಿಟಿಗಳಿಗೆ ಕನ್‌ವೆಷನ್ ಲೇಟ್‌ನಲ್ಲಿ ಕರೆಂಟ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಬಹಳ ಬೇಗ ಪ್ರೋಗ್ರೆಸ್ ಆಗುತ್ತದೆ.

ಶ್ರೀ ಬಿ. ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಪಂಚಾಯಿತಿ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಮಾಡಿ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಎಲ್ಲ ಇಂಜಿನಿಯರ್‌ಗಳನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈ ಕೆಳಗೆ ತಂದು ಪ್ರತಿ 200 ವ್ಯಾ. 3 ಗ್ರಾಮ ಪಂಚಾಯತಿಗಳಿಗೆ ಒಬ್ಬರೇ ಇಂಜಿನಿಯರ್‌ಗೆ ಕೊಟ್ಟಿರುವುದರಿಂದ ಎಲ್ಲಾ ಕೆಲಸಗಳನ್ನೂ ಅವನೇ ನೇರವಾಗಿ ಹೊಣೆ ಆಗುತ್ತಾನೆ. ಹಾಗಾಗಿ ಆ ಒಂದು ಇಂಜಿನಿಯರ್‌ಗಳು ತೊಂದರೆ ಏನಿದೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಆಗಿದೆ. ಇನ್ನು ವಿದ್ಯುಚ್ಛಕ್ತಿ ತೊಂದರೆ, ಅವರು ಹೇಳಿದ ಹಾಗೆ ಕೆಲವು ಕಡೆ ನಮಗೆ ಆ ತರಹ ವಿದ್ಯುಚ್ಛಕ್ತಿ ಇಲಾಖೆಯಿಂದ ಪೂರ್ಣ ಸಹಕಾರ ಸಿಗದೆ ಇರುವುದರಿಂದ ತೊಂದರೆಯಾಗುತ್ತಿದೆ. ಆದಷ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, 2003–04ರ ಬಾಕಿ ಕಾಮಗಾರಿಗಳೂ ಇವೆ, ಅದನ್ನು ಎರಡು–ಮೂರು ತಿಂಗಳುಗಳಲ್ಲಿ ಟೈಮ್ ಬಾಂಡ್ ಪ್ರೋಗ್ರಾಮ್ ಹಾಕಿಕೊಂಡು ಮುಗಿಸುತ್ತೇವೆ. ಆ ಮೇಲೆ 2004–05ಕ್ಕೆ ಕೈ ಹಾಕುತ್ತೇವೆ. ಆಗ ಎನ್‌ಕರೇಜ್‌ಮೆಂಟ್ ಕೊಟ್ಟ ಗ್ರಾಮ ಪಂಚಾಯತಿಗಳಿಗೆ 2005–06ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 90 ಪರ್ಸೆಂಟ್ ದುಡ್ಡು ಕೊಡುತ್ತಿದೆ. ಅದನ್ನು ವಿಚಾರ ಮಾಡಿಕೊಳ್ಳಬೇಕು. 2004–05,2005–06ರ ಕಾಮಗಾರಿಗಳನ್ನು ಯಾವಾಗ ಮುಗಿಸುತ್ತೀರಿ, ಆ ಕೊರತೆಗಳನ್ನು ಸರಿಪಡಿಸಿ ಕಂಪ್ಲೇಟ್ ಮಾಡಿದ್ದಾರೆ ಎಂದರೆ ಹೊಸದಾಗಿ ದುಟ್ಟು ಕೇಳುವುದಕ್ಕೆ ಕಾಂಟ್ರಿಬ್ಯೂಷನ್ 10 ಪರ್ಸೆಂಟ್ ಪಬ್ಲಿಕ್‌ನಿಂದ ತೆಗೆದುಕೊಂಡು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ನೀವು ಏನೋ ಒಂದು ನಿರ್ದಿಷ್ಟ ಕಾಯಾಕ್ರಮ ಹಾಕಿಕೊಳ್ಳುತ್ತೀರಿ. ನಾಳೆ ಮುಂದಿನ ಅಧಿವೇಶನ ಸೇರಿದಾಗ ಕಾಮಗಾರಿ ಮುಗಿದಿದೆ ಯಡಿಯೂರಪ್ಪನವರೇ ಎಂದು ಹೇಳಬಹುದಾ.

ಶ್ರೀ ಬಿ. ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೇ, ಅದಕ್ಕೆ ತುರ್ತಾಗಿ ನಮ್ಮ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಒಂದು ಕಾಲ ಮಿತಿಯಲ್ಲಿ ಈ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಆ ಗ್ರಾಮ ಪಂಚಾಯತಿಗಳಿಗೆ ಹೊಸದಾಗಿ ಬಂದಿದ್ದಾರೆ. ಅವರಿಗೆ ಉತ್ತೇಜನ ಕೊಟ್ಟು ಆ ಕೆಲಸ ಮುಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಿಮ್ಮ ಕ್ಷೇತ್ರ ಮತ್ತು ನಮ್ಮ ಕ್ಷೇತ್ರದಿಂದ ಹಿಡಿದು ಎಲ್ಲ ತೆಗೆದುಕೊಂಡು ಬಳ್ಳಾರಿಗೆ ಹೋಗುತ್ತಿದ್ದಾರೆ. ಅವರು ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ವಲಯ ಸುಧಾರಣೆ ಯೋಜನೆಯಡಿಯಲ್ಲಿ 702 ಲಕ್ಷ ರೂಪಾಯಿಗಳನ್ನು ಬಳ್ಳಾರಿಗೆ ಕೊಟ್ಟಿದ್ದಾರೆ. ಇದು ಒಳ್ಳೆಯ ಕತೆ ಆಯಿತು. ಚುನಾವಣೆ ಬಂದಾಗ ಬಳ್ಳಾರಿ ಪ್ಯಾಕೇಜ್ ಏನು ಘೋಷಣೆ ಆಯಿತು. ಆ ಬಳ್ಳಾರಿ ಬ್ಯಾಕೇಜ್ ಫುಲ್‌ಫಿಲ್ ಮಾಡುವುದಕ್ಕೆ ನಮ್ಮ ರಾಜ್ಯದ ಜನ ಎಲ್ಲ ಕಡೆ ಬೆಲೆ ತೆತ್ತಬೇಕಾಗಿದೆ. 702 ಲಕ್ಷ ರೂಪಾಯಿಗಳನ್ನು ನೀವು ಬಳ್ಳಾರಿಗೆ ಕಳುಹಿಸಿದ್ದೀರಿ. ರಾಜ್ಯದ ಉಳಿದ ಕ್ಷೇತ್ರವರಿಗೂ ಏನು ಅನ್ಯಾಯ ಮಾಡಿದ್ದೇವೆ. ತಪ್ಪು ಮಾಡಿದ್ದೇವೆ. ನಿಮಗೆ ಶಕ್ತಿ ಇದ್ದರೆ, ಬೇರೆ ಹಣ ಕೊಡಿಸಿ. ಕೇಂದ್ರ ಸರ್ಕಾರಕ್ಕೆ ಕೇಳಿ ಬೇರೆ ಹಣ ಕೊಡಲಿ. ಅದು ಬಿಟ್ಟು ನಮ್ಮಲ್ಲಿ ಬಂದಿರುವ ಹಣವನ್ನು ನೀವು ಆ ಕಡೆ ಏಕೆ ಡೈವರ್ಟ್ ಮಾಡಿದ್ದೀರಿ? ಇದು ತಪ್ಪು ಅಲ್ಲವಾ ಅಧ್ಯಕ್ಷರೆ? ಈ ರೀತಿ ಆಗುವುದಕ್ಕೆ ಬಿಡಬಾರದು ಮತ್ತು ನೀವು ಕೇಂದ್ರ ಸರ್ಕಾರಕ್ಕೆ ಕೇಳಬೇಕು. ಬಳ್ಳಾರಿ ಪ್ಯಾಕೇಜ್ ಕೊಡುವುದು ಇದ್ದರೆ ಬೇರೆ ಹಣದಲ್ಲಿ ಕೊಡಲಿ, ಈ ಹಣವನ್ನು ಡೈವರ್ಟ್ ಮಾಡುವುದಕ್ಕೆ ಬಿಡಬಾರದು. ಕೇಂದ್ರ ಸರ್ಕಾರಕ್ಕೆ ತಾವು ಆ ರೀತಿ ಹೇಳಬೇಕು.

ಶ್ರೀ ಬಿ. ಸತ್ಯನಾರಾಯಣ: ಸನ್ಮಾನ್ಯ ಅಧ್ಯಕ್ಷರೆ, ನಾನು ಸಚಿವನಾಗಿ ಆರು ತಿಂಗಳಾಗಿದೆ. ಅದು ಹಿಂದೆ ಆಗಿರುವುದು. ಅದರ ಬಗ್ಗೆ ಈಗಾಗಲೇ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮುಂದೆ ಹಾಗೆ ಆಗದಂತೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, 13.7.05ರ 29ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 175 ಪ್ರಶ್ನೆಗಳ ಪೈಕಿ...

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನನ್ನ ಒಂದು ಪ್ರಶ್ನೆ ಇದೆ. ನಾನು ಸ್ವಲ್ಪ ತಡವಾಗಿ ಬಂದೆ ಕ್ಷಮಿಸಬೇಕು.

ಅಧ್ಯಕ್ಷರು: ಬಿ.ಆರ್. ಪಾಟೀಲರೇ ಎಲ್ಲಿ ಹೋಗಿದ್ದೀರಿ ಸ್ವಾಮಿ ನೀವು.